ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫಸಿ, ನ್ಯಾಯಾಲಯ ಅಂಕೋಲಾ

ಸಿಸಿ ನಂಬರ 292/2020

ಸಿ ಡಬ್ಲ್ಯೂ- 4

ಪಿ ಡಬ್ಲ್ಯೂ- 3

ದಿಃ 16-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ದೀಪಕ ನಾಯ್ಕ

ತಂದೆಯ ಹೆಸರುಃ ಸುಭಾಶ

ವಯಸ್ಸುಃ 35 ವರ್ಷ

ಉದ್ಯೋಗಃ ಮೆಕಾನಿಕ, ಕೆ.ಎಸ್.ಆರ್.ಟಿ.ಸಿ. ಘಟಕ, ಅಂಕೋಲಾ

ವಿಳಾಸಃ ಕೇಣಿ, ಅಂಕೋಲಾ

ಮುಖ್ಯ ವಿಚಾರಣೆ ಮಾನ್ಯ ಎ ಪಿ ಪಿ ಯವರಿಂದಃ

ಕಳೆದ ಒಂಭತ್ತು ವರ್ಷಗಳಿಂದ ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕದಲ್ಲಿ ಮೆಕಾನಿಕ ಎಂದು ಸೇವೆ ಸಲ್ಲಿಸುತ್ತಿದ್ದೇನೆ. 2018 ರಲ್ಲಿ ಚಾಸಾ-1 ರವರು ಅಂಕೋಲಾ ಕೆ.ಎಸ್.ಆರ್.ಟಿ.ಸಿ. ಘಟಕ ಡಿಪೋ ಮ್ಯಾನೇಜರ ಎಂದು ಸೇವೆ ಸಲ್ಲಿಸುತ್ತಿದ್ದರು. ಚಾಸಾ-2, 3, 5 ರಿಂದ 9 ಕೆ.ಎಸ್.ಆರ್.ಟಿ.ಸಿ. ಘಟಕದ ಸಿಬ್ಬಂದಿಗಳಿರುತ್ತಾರೆ. ಆರೋಪಿ 2018 ರಲ್ಲಿ ಚಾಲಕ ಎಂದು ಸೇವೆ ಸಲ್ಲಿಸುತ್ತಿದ್ದ. ದಿಃ 14-08-2018 ರಂದು ಸಾಯಂಕಾಲ 4.00 ಗಂಟೆಗೆ ಪೊಲೀಸರು ಪಂಚನಾಮೆ ಸಲುವಾಗಿ ಡಿಪೋಗೆ ಬಂದಿದ್ದರು. ಪಂಚನಾಮೆ ಸ್ಥಳವನ್ನು ಚಾಸಾ-6 ತೋರಿಸಿರುತ್ತಾರೆ. ಚಾಸಾ-5 ರವರು ಕೂಡ ಹಾಜರಿದ್ದರು. ಘಟನಾಸ್ಥಳದ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು,

ಅದನ್ನು ನಿಪಿ-11, ಸಾಕ್ಷಿ ಸಹಿಯನ್ನು ನಿಪಿ-11 ಎ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-4 ದಾಖಲೆ ನೋಡಿ ಅದರಲ್ಲಿಯೂ ತನ್ನ ಸಹಿ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಸಾಕ್ಷಿ ಸಹಿಯನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ಮಾಹಿತಿ ಇಲ್ಲ. ಘಟನೆ ಕುರಿತು ಮಾಹಿತಿ ಇಲ್ಲ.

ಈ ಹಂತದಲ್ಲಿ ಎ.ಪಿ.ಪಿ. ಯವರು ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕಾಗಿ ಕೋರಿಕೊಂಡಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿರುತ್ತದೆ. ಎ.ಪಿ.ಪಿ.ಯವರಿಗೆ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.

ಪಾಟಿ ಸವಾಲುಃ ಎ.ಪಿ.ಪಿ. ಯವರಿಂದಃ

ದಿಃ 30-07-2018 ಮತ್ತು 31-07-2018 ರಂದು ಡ್ಯೂಟಿ ವಿಚಾರವಾಗಿ ಚಾಸಾ-6 ರವರು ಆರೋಪಿ ಫೋನಿನಲ್ಲಿ ಅವಾಚ್ಯ ಶಬ್ದಗಳಿಂದ ಬೈದಿದಕ್ಕಾಗಿ ಕ್ರಮ ಕೈಗೊಳ್ಳಲು ಶಿರಸಿ ಉಪವಿಭಾಗಕ್ಕೆ ಪತ್ರ ರವಾನೆ ಮಾಡಲಾಗಿತ್ತು ಎಂದರೆ ಗೊತ್ತಿಲ್ಲ. ದಿಃ 12-08-2018 ರಂದು KSRTC ಡಿಪೋದ ವಾಹನ ದುರಸ್ತಿ ಕಾರ್ಯಾಗಾರದ ಬಳಿ ಪಂಚನಾಮೆ ಮಾಡಿ, ಓದಿ ಹೇಳಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ-1 ರವರು ತೋರಿಸಿದ ಟಿಕೇಟ್ ಕೌಂಟರ ಕೊಠಡಿ ಎದುರು ಸ್ಥಳವನ್ನು ಪೊಲೀಸರು ಪಂಚನಾಮೆ ಮಾಡಿದ್ದು, ಅದಕ್ಕೆ ಸಹಿ ಮಾಡಿದ್ದೇನೆ ಎಂದರೆ ಕೇವಲ ಸಹಿ ಮಾತ್ರ ಪಡೆದಿರುತ್ತಾರೆ ಎಂದು ಹೇಳುತ್ತಾರೆ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ  ಆರೋಪಿ ಪರ ಶ್ರೀ ಎನ್.ಆರ್.ಎನ್.  ವಕೀಲರಿಂದಃ

ಪೊಲೀಸರು ಡಿಪೋಗೆ ಬಂದು ಹೋಗಿದ್ದರ ಸಲುವಾಗಿ  ಸಹಿ ಮಾಡು ಎಂದು ಹೇಳಿದ್ದರಿಂದ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ಸರಿ.  ಚಾಸಾ-1 ಮತ್ತು 6 ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ಪಂಚನಾಮೆಯಲ್ಲಿ ಬರೆದ ಸಂಗತಿ ಮಾಹಿತಿ ಇಲ್ಲ ಎಂದರೆ ಸರಿ. ಸದರಿ ಸಹಿ ಪಡೆದ ದಾಖಲೆ ಯಾವ ಕಾರಣಕ್ಕಾಗಿ ಮಾಡಿರುತ್ತಾರೆಂದು ಹೇಳಲು ಬರುವುದಿಲ್ಲ ಎಂದರೆ ಸರಿ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿ ಇದೆ

ಜೆ.ಎಂ.ಎಫ್.ಸಿ.,ಅಂಕೋಲಾ.